# ಗ್ರಾಮಭಾರತಿ

# ಕಾವ್ಯ ಸಂಭ್ರಮ

ಮಾಲಿಕೆ ೧

**ಪ್ರಧಾನ ಸಂಪಾದಕರು**

**ಎಸ್.ಸಿ.ಕಿರಣ್‌ಕುಮಾರ್**

**ಸಂಪಾದಕರು**

**ಹೆಚ್.ಎನ್.ವಜ್ರಪ್ರಸಾದ್**

**ಪ್ರಕಾಶನ**

**ಗ್ರಾಮಭಾರತಿ ವಿದ್ಯಾಸಂಸ್ಥೆ**

ಶ್ರೀ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ (ರಿ.)
ಕೃಷ್ಣರಾಜಪೇಟೆ – 571426, ಮಂಡ್ಯ ಜಿಲ್ಲೆ.

# ಕಾವ್ಯ ಸಂಭ್ರಮ ಕವನ ಸಂಕಲನ

**ಗ್ರಾಮಭಾರತಿ ಕಾವ್ಯ ಸಂಭ್ರಮ ಮಾಲಿಕೆಯು ಮೊದಲನೆಯ ಪ್ರಕಟಣೆಯಾಗಿದ್ದು ಗ್ರಾಮಭಾರತಿ ವಿದ್ಯಾಸಂಸ್ಥೆ ವತಿಯಿಂದ ಪ್ರಕಾಶಿಸಲ್ಪಟ್ಟಿರುತ್ತದೆ.**

| | | |
|---|---|---|
| ಮೊದಲ ಮುದ್ರಣ | : | 2024 |
| ಪ್ರಕಾರ | : | ಕವಿಗೋಷ್ಠಿ ಕವನಗಳು |
| ಪ್ರಕಾಶಕರು ಮತ್ತು ಕೃತಿ ಸೌಮ್ಯ | : | ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)<br>ಮೈಸೂರು – ಚನ್ನರಾಯಪಟ್ಟಣ ರಸ್ತೆ,<br>ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ. |
| ಪುಟಗಳು | : | 44 |
| ಬೆಲೆ | : | 50/– ರೂ. |
| ಪುಸ್ತಕದ ಅಳತೆ | : | 1/8 ಡೆಮ್ಮಿ ಸೈಜ್ |
| ಪೇಪರ್ | : | 80 ಜಿಎಸ್‌ಎಂ. |
| ಮುದ್ರಣ | : | ಜಿ.ಬಿ & ಎಸ್.ಎಸ್.ಕೆ.ಸಿ ಕ್ರಿಯೇಷನ್<br>ಮೈಸೂರು – ಚನ್ನರಾಯಪಟ್ಟಣ ರಸ್ತೆ,<br>ಕೃಷ್ಣರಾಜಪೇಟೆ–571426 ಮೊ: 92428 77708 |



# ಆಶಯ ನುಡಿಗಳು

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)., ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ವಿದ್ಯಾಭ್ಯಾಸ ನೀಡುವುದಕ್ಕಾಗಿ ದಿ.ಎಸ್.ಎಂ.ಲಿಂಗಪ್ಪನವರು 21.10.1974 ರಂದು ಸ್ಥಾಪಿಸಿದರು. ಎಸ್.ಎಂ.ಲಿಂಗಪ್ಪನವರ ನಿಧನದ ನಂತರ ದಿ.ಎಸ್.ಸಿ.ಚಿಕ್ಕಣ್ಣಗೌಡರು ಈ ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಅಲ್ಲದೆ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ಅನ್ನು 2005 ರಲ್ಲಿ ಪ್ರಾರಂಭಿಸಿದರು. ಪ್ರಾರಂಭವಾದಾಗಿನಿಂದ ಇಂದಿನವರೆಗೂ ಈ ಎರಡು ಸಂಸ್ಥೆಗಳು ಕೃಷ್ಣರಾಜಪೇಟೆಯ ಮೈಸೂರು–ಚನ್ನರಾಯಪಟ್ಟಣ ಮುಖ್ಯ ರಸ್ತೆಯಲ್ಲಿರುವ ಮೂರು ಎಕರೆ ಪ್ರದೇಶದಲ್ಲಿ ಬೃಹತ್ ಸ್ವಂತ ಕಟ್ಟಡದಲ್ಲಿ ಸುಮಾರು 1350 ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಅಲ್ಲದೆ ಸುಮಾರು 76 ಜನ ಈ ಎರಡು ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಾ ತಮ್ಮ ಜೀವನ ಕಟ್ಟಿಕೊಂಡಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಪ್ರೋತ್ಸಾಹ ನೀಡುವುದು ಬಹಳ ಅವಶ್ಯ. ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಪ್ರತಿಯೊಬ್ಬ ಗುರುವಿನ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ. ಆ ನಿಟ್ಟಿನಲ್ಲಿ ಶ್ರೀಯುತ ಹೆಚ್.ಎನ್.ವಜ್ರಪ್ರಸಾದ್ ಅವರು ಈ ಕಾವ್ಯ ಸಂಭ್ರಮ ಆಯೋಜಿಸುವ ಆಲೋಚನೆಯೊಂದಿಗೆ ನನ್ನ ಅನುಮತಿಗಾಗಿ ಬಂದರು, ನನಗಂತೂ ಬಹಳ ಸಂತೋಷವಾಯಿತು. ಈ ರೀತಿಯ ಕಾರ್ಯಕ್ರಮಗಳು ಮಕ್ಕಳಿಗೆ ತಮ್ಮ ಪ್ರತಿಭೆಯ ಅನಾವರಣಗೊಳಿಸಲು ಸೂಕ್ತ ವೇದಿಕೆ ಕಲ್ಪಿಸಿಕೊಟ್ಟಂತಾಗುತ್ತದೆ. ಅಲ್ಲದೆ ಹಿರಿಯ ಸಾಹಿತಿಗಳಿಂದ ಮಕ್ಕಳ ಕವನಗಳ ವಿಮರ್ಶೆಯೊಂದಿಗೆ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ.

'ಗ್ರಾಮಭಾರತಿ ಕಾವ್ಯ ಸಂಭ್ರಮ' ಕಾರ್ಯಕ್ರಮದ ಮತ್ತೊಂದು ವಿಶೇಷತೆಯೆಂದರೆ, ಕಾವ್ಯ ಸಂಭ್ರಮದಲ್ಲಿ ವಾಚನ ಮಾಡಿದ ಕವನಗಳ ಸಂಕಲನವನ್ನು ಇದೆ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸುತ್ತಿರುವುದು ಹಾಗೂ ಹಿರಿಯ ಸಾಹಿತಿಗಳಾದ ಶ್ರೀಯುತ ಎಂ.ಕೆ.ಹರಿಚರಣ್‌ತಿಲಕ್ ಅವರ ಈ ಕವನಗಳ ಬಗೆಗಿನ ವಿಮರ್ಶೆಯೂ ಇದರಲ್ಲಿರುವುದು ಸಾಹಿತ್ಯ ಕ್ಷೇತ್ರದಲ್ಲಿ ಇದೇ ಮೊದಲಿರಬಹುದು. ನಮ್ಮ ಸಂಸ್ಥೆಯಲ್ಲಿ 2023ರ ಜೂನ್ 26 ರಿಂದ 28 ರವರೆಗೆ ಬಿ.ಇಡಿ. ವಿದ್ಯಾರ್ಥಿಗಳಿಗೆ ಕೃಷ್ಣರಾಜಪೇಟೆ ತಾಲ್ಲೂಕಿನ ಹಿರಿಯ ಮತ್ತು ಕಿರಿಯ ಸಾಹಿತಿಗಳ ಆಯ್ದ ಕೃತಿಗಳನ್ನು ನೀಡಿ ಅವರಿಂದ ಆ ಕೃತಿಗಳ ಕುರಿತು ಪ್ರಬಂಧ ಮಂಡನೆಯನ್ನು ಮಾಡಲು 'ಸಾಹಿತ್ಯ ಸಂಭ್ರಮ' ಎಂಬ ಹೆಸರಿನಲ್ಲಿ ವೇದಿಕೆ ಕಲ್ಪಿಸಿಕೊಡಲಾಗಿತ್ತು. ಈಗ 'ಗ್ರಾಮಭಾರತಿ ಕಾವ್ಯ ಸಂಭ್ರಮ' ಎಂಬ ಹೆಸರಿನಲ್ಲಿ ಮಕ್ಕಳ ಕವನ ವಾಚನಕ್ಕೆ ಸೂಕ್ತ ವೇದಿಕೆ ಕಲ್ಪಿಸಿರುವುದಕ್ಕಾಗಿ ಶ್ರೀಯುತ ಹೆಚ್.ಎನ್.ವಜ್ರಪ್ರಸಾದ್ ಅವರಿಗೆ ಮತ್ತು ಅವರೊಂದಿಗೆ ಸಹಕರಿಸಿದ ಸರ್ವರನ್ನು ಅಭಿನಂದಿಸುತ್ತೇನೆ ಹಾಗೂ ಈ ಕಾರ್ಯಕ್ರಮದ ಯಶಸ್ಸಿಗಾಗಿ ಶುಭಕೋರುತ್ತೇನೆ. ಮುಂದೆಯೂ ಸಹ ಅವಶ್ಯವಿದ್ದಾಗಲೆಲ್ಲ ಇಂತಹ ಕಾರ್ಯಕ್ರಮಗಳನ್ನು ಅಯೋಜಿಸುವಂತಾಗಲೆಂದು ಆಶಿಸೋಣ.

**ಪ್ರಧಾನ ಸಂಪಾದಕರು**

**ಶ್ರೀ ಕಿರಣ್ ಕುಮಾರ್.ಎಸ್.ಸಿ**

ಅಧ್ಯಕ್ಷರು

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ).



# ಶುಭಾಕಾಂಕ್ಷೆ

ಸರ್ವರಿಗೂ ಅನ್ನದಾತನ ಸುಗ್ಗಿಯ ಸಂಭ್ರಮ, ಸಂಕ್ರಾಂತಿ ಹಬ್ಬದ ಶುಭಾಶಯಗಳು ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಕನ್ನಡ ಸಾಹಿತ್ಯ ಪರಿಷತ್ತು ಒಳಗೊಂಡಂತೆ ಇತರೆ ಯಾವುದೇ ಸಂಘಟನೆಗಳು ಆಯೋಜಿಸಿದ ಕವಿಗೋಷ್ಠಿಗಳು ಅಂದಿನ ಕಾರ್ಯಕ್ರಮದಲ್ಲಿ ಸಭಿಕರ ಮುಂದೆ ವಾಚನಕಷ್ಟೆ ಸೀಮಿತಗೊಂಡಿವೆ. ಆದರೆ ಪ್ರಸ್ತುತ ಗ್ರಾಮಭಾರತಿ ವಿದ್ಯಾಸಂಸ್ಥೆ ಮತ್ತು ಎಸ್.ಎಂ. ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಕವಿಗೋಷ್ಠಿಯು ವಿಭಿನ್ನ ಮತ್ತು ವೈಶಿಷ್ಟ್ಯಪೂರ್ಣವಾದುದ್ದು. ಕವಿಗೋಷ್ಠಿಯ ಪೂರ್ವಭಾವಿಯಾಗಿ ಕವಿಗಳು ಪ್ರಸ್ತುತ ಪಡಿಸಲಿರುವ ಕವನಗಳನ್ನು ಸಂಗ್ರಹಿಸಿ "ಗ್ರಾಮಭಾರತಿ ಕಾವ್ಯ ಸಂಭ್ರಮ" ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಹೊರತರುತ್ತಿರುವ ಸಂಗತಿ ಶ್ಲಾಘನೀಯವಾಗಿದೆ. ಮಾತೃಶ್ರೀರವರ ಮಾರ್ಗದರ್ಶನದಲ್ಲಿ ಸಹಧರ್ಮಿಣಿಯ ಸಹಭಾಗಿತ್ವದಲ್ಲಿ ಮತ್ತು ಸಂಸ್ಥೆಯ ಸರ್ವರ ಸಹಕಾರದೊಂದಿಗೆ ಶಿಸ್ತುಬದ್ಧ, ನೇರ ನಡೆ, ನುಡಿಯು ಸರಳ ಸಜ್ಜನ ವ್ಯಕ್ತಿತ್ವದ, ಅಧ್ಯಕ್ಷರಾದ ಶ್ರೀಯುತ ಎಸ್.ಸಿ.ಕಿರಣ್‌ಕುಮಾರ್‌ರವರ ಈ ಆಲೋಚನಾ ಶಕ್ತಿಗೆ ಕೃಷ್ಣರಾಜಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಂದನೆಗಳೊಂದಿಗೆ.

**ಹೆಚ್.ಆರ್. ಪೂರ್ಣಚಂದ್ರ ತೇಜಸ್ವಿ**
**ಅಧ್ಯಕ್ಷರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಕೃಷ್ಣರಾಜಪೇಟೆ.**



# ಸಂಪಾದಕರ ನುಡಿ

ಗ್ರಾಮಭಾರತಿ ವಿದ್ಯಾಸಂಸ್ಥೆ ಸ್ಥಾಪನೆ ಕಲ್ಪನೆಯೇ ವಿಶಿಷ್ಟವಾದದ್ದು. "ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ" ಎಂಬ ಧ್ಯೇಯ. ಈ ನಿಟ್ಟಿನಲ್ಲಿ ಅದು ಇಟ್ಟಿರುವ ಹೆಜ್ಜೆ ಬಹುಮುಖಿಯಾದದ್ದು. ಇಂತಹ ಒಂದು ಹೆಜ್ಜೆಗಳಲ್ಲಿ ನಾವು ಹೊರತರುತ್ತಿರುವ "ಗ್ರಾಮಭಾರತಿ ಕಾವ್ಯ ಸಂಭ್ರಮ" ಒಂದಾಗಿದೆ. "ಗ್ರಾಮಭಾರತಿ ಕಾವ್ಯ ಸಂಭ್ರಮ–ಅನೇಕ ಪ್ರಫುಲ್ಲಿತ ಪುಷ್ಪಗಳು, ಇನ್ನೂ ಕಣ್ಣೇ ಬಿಡದ ಮೊಗ್ಗುಗಳು, ಅರಳಲು ತವಕಿಸುತ್ತಿರುವ ಮೊಗ್ಗುಗಳು, ಚೆಲುವಿನ ಚಿಗುರು, ಅರೆಬಿರಿದ ಮುಗುಳುಗಳು, ನಗುವಿನ ಹಸಿರು, ಕುಡಿ, ಮಿಡಿ ಎಲ್ಲಾ ನೋಡಿದೆ, ಸಂತೋಷವಾಯಿತು. ಕನ್ನಡಮ್ಮ ಬಂಜೆ ಅಲ್ಲ; ಅವಳು ರತ್ನಗರ್ಭೆ! ಎಂತೆಂತಹ ಪ್ರತಿಭಾ ಚೇತನಗಳಿಗೆ ಜನ್ಮ ಕೊಟ್ಟಿದ್ದಾಳೆ ಎಂದು ಅಚ್ಚರಿಗೊಂಡೆ" ಎಂಬ ಸಾ.ಶಿ.ಮರುಳಯ್ಯನವರ ಕವಿ ನುಡಿಯಂತೆ, ನಮ್ಮ ವಿದ್ಯಾಸಂಸ್ಥೆಯ ವಿದ್ಯಾರ್ಥಿ ಕವಿಗಳ ಕವನ ಸಂಕಲನ ಇದಾಗಿದೆ.

ವಿದ್ಯಾರ್ಥಿಗಳಿಂದ ಕವನಗಳನ್ನು ಕೋರಿದಾಗ ನಮ್ಮ ನಿರೀಕ್ಷೆಗೂ ಮೀರಿ ಕವನಗಳು ಬಂದವು. ಮಕ್ಕಳಲ್ಲಿ ಸುಪ್ತವಾಗಿರುವ ಕಾವ್ಯ ರಚನೆಯ ಪ್ರಯತ್ನ ಕವನಗಳ ಮೂಲಕ ಅರಳಿದೆ. ಈ ಪ್ರಯತ್ನ ಇಲ್ಲಿಗೆ ಸ್ಥಗಿತವಾಗದೆ ನಿರಂತರ ಹರಿಯುವ ಜೀವ ನದಿಯಾಗಲಿ, ಕನ್ನಡ ಸಾರಸ್ವತ ಲೋಕದ ಅನರ್ಘ್ಯ ರತ್ನಗಳಾಗಲಿ ಎಂಬ ಆಶಯದೊಂದಿಗೆ ಕವನ ಸಂಕಲನ ಅನಾವರಣಗೊಳಿಸುತ್ತಿದ್ದೇವೆ. ಕವಿಗೋಷ್ಠಿಯ ದಿನದಂದೇ 'ಗ್ರಾಮಭಾರತಿ ಕಾವ್ಯ ಸಂಭ್ರಮ' ಕವನ ಸಂಕಲನ ಬಿಡುಗಡೆಗೊಳ್ಳುತ್ತಿರುವುದು ಒಂದು ವೈಶಿಷ್ಟ್ಯ ಹಾಗೂ ನಮ್ಮ ಸಂಸ್ಥೆಯ ಹೆಮ್ಮೆ. ಇದು ಗ್ರಾಮಭಾರತಿ ಮತ್ತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ಪ್ರಕಾಶನದಿಂದ ಪ್ರಕಟಿಸುತ್ತಿರುವ ಐದನೇ ಕೃತಿಯಾಗಿದೆ.

ಕವನ ಸಂಕಲನ ಹೊರಬರಲು ಪ್ರೇರಣೆ, ಸ್ಫೂರ್ತಿ, ಮಾರ್ಗದರ್ಶನ ನಮ್ಮ ಗ್ರಾಮಭಾರತಿ ವಿದ್ಯಾಸಂಸ್ಥೆ ಮತ್ತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್‌ಕುಮಾರ್‌ರವರು. 'ವಿದ್ಯಾರ್ಥಿಗಳು ನಮ್ಮ ಅನ್ನದಾತರು' ಎಂಬ ಹೃದಯವಂತಿಕೆ, ಸದಾ ವಿದ್ಯಾಸಂಸ್ಥೆಯ ಅಭಿವೃದ್ಧಿಯಲ್ಲಿ 'ಕಾಯಕ ಜೀವಿ'ಯಾಗಿ ನಮ್ಮೆಲ್ಲರ ಹಿತಕಾಯುವ ನಮ್ಮ ಗೌರವಾನ್ವಿತ ಅಧ್ಯಕ್ಷರಿಗೆ ಹಾಗೂ ವಿದ್ಯಾಸಂಸ್ಥೆಯ ಪ್ರತಿಯೊಬ್ಬರಿಗೂ ಮಾತೃಶ್ರೀ ಸ್ವರೂಪಿಯಾಗಿರುವ ಗೌರವಾನ್ವಿತ ಕಾರ್ಯದರ್ಶಿಗಳಾದ ಮಾತೃಶ್ರೀ ಕೆ.ಎಂ.ಪುಟ್ಟಲಕ್ಷ್ಮಮ್ಮನವರಿಗೆ ಗೌರವಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇನೆ.

ಕೃಷ್ಣರಾಜಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು, ವಿಶ್ರಾಂತ ಕನ್ನಡ ಉಪನ್ಯಾಸಕರು ಮಿಗಿಲಾಗಿ ನನ್ನ ಗುರುಗಳಾದ ಶ್ರೀ ಎಂ.ಕೆ.ಹರಿಚರಣತಿಲಕ್ ಅವರು 'ಮುನ್ನುಡಿ' ಬರೆದು ಕಾವ್ಯಲೋಕಕ್ಕೆ ಕಣ್ಣು ತೆರೆಯುತ್ತಿರುವ ಮಕ್ಕಳನ್ನು ಹರಸಿರುವ ಗುರುಗಳಿಗೆ, 'ಬೆನ್ನುಡಿ' ಬರೆದು ಕವನ ಸಂಕಲನವನ್ನು ತುಂಬು ಹೃದಯದಿಂದ ಅನಾವರಣಗೊಳಿಸಿದ ನಾಡಿನ ಅನ್ನದಾತ ರೈತನ ನೋವಿಗಾಗಿ ಸದಾ ಮಿಡಿಯುವ ಮಾತೃ ಸಮಾನರು, ರಾಜ್ಯ ರೈತ ಸಂಘದ ಮಹಿಳಾ ಘಟಕದ ಮಾಜಿ ಅಧ್ಯಕ್ಷರಾದ ಶ್ರೀಮತಿ ನಂದಿನಿ ಜಯರಾಂ ಅವರಿಗೆ, ಶುಭ ಸಂದೇಶವನ್ನು ನೀಡಿದ ಗೆಳೆಯ, ಕೃಷ್ಣರಾಜಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾಹಿತ್ಯತೇರನ್ನು ಯಶಸ್ವಿಯಾಗಿ ಎಳೆಯುತ್ತಿರುವ ಶ್ರೀ ಹೆಚ್.ಆರ್.ಪೂರ್ಣಚಂದ್ರತೇಜಸ್ವಿಯವರಿಗೆ, ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಶ್ರೀ. ಶಿವರಾಜು, ಶ್ರೀಮತಿ ವೀಣಾ ಸಾಣಿಕೊಪ್ಪ, ಶ್ರೀಮತಿ ರಶ್ಮಿ, ಶ್ರೀಮತಿ ಮೋನಿಕಾರವರಿಗೆ ಹಾಗೂ GB & SSKC ಕುಟುಂಬ ಸದಸ್ಯರಿಗೆ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಮ್ಮೊಡನೆ ಸಹಕರಿಸಿದ ಸಮಸ್ತ ಆತ್ಮೀಯ ವೃಂದಕ್ಕೆ ನನ್ನ ಮನದಾಳದ ಅನಂತ ವಂದನೆಗಳನ್ನು ಸಮರ್ಪಿಸುತ್ತೇನೆ.

**ಸಂಪಾದಕರು**

**ಹೆಚ್.ಎನ್.ವಜ್ರಪ್ರಸಾದ್**

**ಸಹ ಶಿಕ್ಷಕರು, ಗ್ರಾಮಭಾರತಿ ಪ್ರೌಢಶಾಲೆ**



# ಮುನ್ನುಡಿ

ಕೃಷ್ಣರಾಜಪೇಟೆ ಪಟ್ಟಣದ ಪ್ರತಿಷ್ಠಿತ ಗ್ರಾಮಭಾರತಿ ವಿದ್ಯಾಸಂಸ್ಥೆ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸಲು 'ಗ್ರಾಮಭಾರತಿ–ಕಾವ್ಯ ಸಂಭ್ರಮ'ದ ಹೆಸರಿನಲ್ಲಿ ವಿದ್ಯಾರ್ಥಿ ಕವಿಗೋಷ್ಠಿಯನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ರಾಜ್ಯದೆಲ್ಲೆಡೆ ವಿವಿಧ ಸಂಘ ಸಂಸ್ಥೆಗಳು, ಸಾಂಸ್ಕೃತಿಕ ಸಂಘಟನೆಗಳು ಕವಿಗೋಷ್ಠಿಗಳನ್ನು ಆಯೋಜಿಸುವುದು ಸಾಮಾನ್ಯ. ಆದರೆ ಒಂದು ಶಿಕ್ಷಣ ಸಂಸ್ಥೆ ತನ್ನದೇ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಅರಳಿಸಿ ಅದರ ಕಂಪನ್ನು ಹೊರಸೂಸುವಂತೆ ಮಾಡಿರುವ ಪ್ರಯತ್ನ ಇತರೆ ವಿದ್ಯಾಸಂಸ್ಥೆಗಳಿಗೂ ಅನುಕರಣೀಯ. ನಮ್ಮ ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಅಪಾರ ಪ್ರತಿಭೆಯಿದೆ. ಅದು ಅರಳಲು ಸೂಕ್ತ ವೇದಿಕೆಗಳಿಲ್ಲ. ಅಂಕಗಳಿಕೆಯೇ ಪ್ರಧಾನವಾಗಿರುವ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ನಮ್ಮ ಮಕ್ಕಳು ಸಾಂಸ್ಕೃತಿಕವಾಗಿ ಸೊರಗುತ್ತಿವೆ. ಕಲಿಕೆಯ ಒತ್ತಡ ಮತ್ತು ಮೊಬೈಲ್ ಸಂಸ್ಕೃತಿ ಮಕ್ಕಳ ಆಲೋಚನಾ ಶಕ್ತಿಯನ್ನು ಕುಗ್ಗಿಸುತ್ತಿದೆ. ಸಿನಿಮಾ ಹಾಡುಗಳಿಗೆ ತುಟಿಬಿಚ್ಚಿ ಕುಣಿಯುವುದನ್ನು ಪ್ರಧಾನವಾಗಿಸಿಕೊಂಡು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕವಾದ ಇತರೆ ಕ್ಷೇತ್ರಗಳಿಗೆ ಪ್ರೋತ್ಸಾಹದ ಕೊರತೆ ಕಾಡುತ್ತಿದೆ. ಜಡ್ಡುಗಟ್ಟಿದ ಶಿಕ್ಷಣ ವ್ಯವಸ್ಥೆಯ ನಡುವೆ ಗ್ರಾಮೀಣ ಪ್ರದೇಶದ ಶಿಕ್ಷಣ ಸಂಸ್ಥೆಯೊಂದು ಹೊಸ ಆಲೋಚನೆಗಳೊಂದಿಗೆ ವಿದ್ಯಾರ್ಥಿಗಳನ್ನು ಉತ್ತೇಜಿಸಲು ಹೊರಟಿದೆ. ಕ್ರಿಯಾಶೀಲ ಮನಸ್ಸುಗಳಿಂದ ಮಾತ್ರ ಕ್ರಿಯಾಶೀಲ ಆಲೋಚನೆಗಳು ಹೊರಹೊಮ್ಮಲು ಸಾಧ್ಯ. ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್‌ಕುಮಾರ್ ಸಾಂಸ್ಕೃತಿಕ ಮನಸ್ಸಿನ ವ್ಯಕ್ತಿ. ಅವರ ಸಂಸ್ಥೆಯ ಆವರಣದಲ್ಲಿ ಸಾಕಷ್ಟು ಕಲೆ ಮತ್ತು ಸಾಹಿತಿಕ ಚಟುವಟಿಕೆಗಳು ನಡೆಯುತ್ತಿವೆ. ಅದಕ್ಕೆ ಪೂರಕವಾಗಿ ಕಿರಣ್‌ಕುಮಾರ್ ಅವರು ತಮ್ಮ ಶಾಲೆಯಲ್ಲಿಯೇ ಸಾಂಸ್ಕೃತಿಕ ಮನಸ್ಸುಗಳನ್ನು ಸೃಷ್ಠಿಸಿದ್ದಾರೆ. ಕವಿಗೋಷ್ಠಿಯ ಕವಿಗಳನ್ನು ನೋಡಿದಾಗ ನನಗೆ ನಿಜಕ್ಕೂ ವಿಸ್ಮಯವಾಯಿತು. ಒಂದು ಶಿಕ್ಷಣ ಸಂಸ್ಥೆಯೊಳಗೆ ಅದೆಷ್ಟು ಕವಿಗಳು ಪರಿಪಕ್ವಗೊಂಡು ವಿಕಸಿಸಿದರೆ ಕನ್ನಡ ಸಾಹಿತ್ಯ ಲೋಕ ಮತ್ತಷ್ಟು ತುಂಬಿ ತುಳುಕಾಡುತ್ತದೆ. ಇದಕ್ಕೆ ಕಾರಣಕರ್ತರಾದ ಎಸ್.ಸಿ.ಕಿರಣ್‌ಕುಮಾರ್ ಅಭಿನಂದನೀಯರು.

ಗ್ರಾಮಭಾರತಿ ವಿದ್ಯಾಸಂಸ್ಥೆಯ ಕವಿಗೋಷ್ಠಿಯ ಕವನಗಳು ಪ್ರಬುದ್ಧ, ಪ್ರೌಢ ಮತ್ತು ಶಿಶುಗೀತೆಗಳೆಂದು ಮೂರು ಹಂತದಲ್ಲಿ ವಿಶ್ಲೇಷಿಸಬಹುದು. ಪ್ರಬುದ್ಧ ಹಂತದಲ್ಲಿ ಶಿಕ್ಷಕ ವೃಂದವಿದ್ದರೆ ಪ್ರೌಢ ಹಂತದಲ್ಲಿ ಕಾಲೇಜು ಮತ್ತು ಶಾಲಾ ವಿದ್ಯಾರ್ಥಿಗಳಿದ್ದಾರೆ. ಪ್ರಾಥಮಿಕ ಹಂತದ ವಿದ್ಯಾರ್ಥಿಗಳ ಶಿಶುಗೀತೆಗಳನ್ನು ಕಾಣಬಹುದು.

ಶಿಕ್ಷಕರ ಹಂತದ ಕವನಗಳಲ್ಲಿ ಹೆಚ್ಚು ಗಟ್ಟಿಯಾಗಿ ಹೊರ ಹೊಮ್ಮಿದ ಕವಿತೆ ಎಚ್.ಎನ್.ವಜ್ರಪ್ರಸಾದ್ ಅವರ "ನಾಜ಼ೀಜಂ" ಸಿದ್ಧಾಂತ ಕುರಿತದ್ದು. ನಾಜ಼ೀಜಂ ಸಿದ್ಧಾಂತದಿಂದ ಜಗತ್ತಿನ ದೇಶಗಳಲ್ಲಿ ಉಂಟಾದ ಸೈದ್ಧಾಂತಿಕ ಚಿಂತನೆಗಳು ಮತ್ತು ಅದರ ದುಷ್ಪರಿಣಾಮಗಳನ್ನು ಕವಿ ಸಮರ್ಥವಾಗಿ ಬಿಂಬಿಸಿದ್ದಾರೆ.

ಜಗತ್ತನ್ನೇ ಜಯಿಸಬೇಕೆಂಬ ಮಹತ್ವಾಕಾಂಕ್ಷೆ,
'ಸರ್ವಾಧಿಕಾರ' ಸರ್ವಸ್ವವೆಂಬ ಅಹಂ
ಹಿಂಸೆಯಿಂದ ಶ್ರೇಷ್ಠತೆಯ ಮದ
ಅಂತ್ಯವಾಯಿತೇ ನಿನ್ನ ದುರಂತ ಸಾವಿನಲಿ ॥

ಎನ್ನುವ ಮೂಲಕ ಹಿಟ್ಲರ್ನ ಸರ್ವಾಧಿಕಾರ ಮತ್ತು ಶ್ರೇಷ್ಠತೆಯ ಪಥನವನ್ನು ಸಾರಿರುವ ಕವಿ ಗಾಂಧಿಯ ಅಹಿಂಸಾ ಮಾರ್ಗದ ಮಹತ್ವವನ್ನು ಸಾರಿದ್ದಾರೆ.

ಒಬ್ಬ ಅಧ್ಯಾಪಕಿಯ ಮನಸ್ಸಿನ ಭಾವನೆಗಳು ಶಾಂತಲ ಅಂಬರಹಳ್ಳಿ ಅವರ ಕವಿತೆಗಳಲ್ಲಿ ಹೊರಹೊಮ್ಮಿವೆ. ತಾನು ಕಲಿಸುತ್ತಿರುವ ಶಾಲೆಯ ಬಗೆಗೆ ಸಹಜವಾದ ಅಭಿಮಾನವನ್ನು ವ್ಯಕ್ತಪಡಿಸುತ್ತಲೆ ಕವಯತ್ರಿ "ನೀವಾಗದಿರಿ ದೀಪದ ಬೆಳಕಿಗೆ ಬಲಿಯಾಗುವ ಪತಂಗ" ಎನ್ನುವ ಮೂಲಕ ವಿದ್ಯಾರ್ಥಿಗಳಿಗೆ ಸತ್ಸಂಗದ ಮಹತ್ವವನ್ನು ಸಾರಿದ್ದಾರೆ. "ಕಷ್ಟಪಟ್ಟು ಓದಿದರೆ ನಿನ್ನ ಗುರಿ ತಲುಪುವುದು  ಉತ್ತುಂಗ" ಎನ್ನುವ ಮೂಲಕ ಗುರಿಯೆಡಗಿನ ಬದುಕಿನ ಮಾರ್ಗವನ್ನು ತೋರಿಸಿದ್ದಾರೆ. ಕವಯತ್ರಿ ಶಾಂತಲ ಅಂಬರಹಳ್ಳಿ ಹೊಸ ಬದುಕಿನ ಜಂಜಾಟಗಳಿಗೆ ಸಿಕ್ಕಿ ತೊಳಲಾಡುತ್ತಿದ್ದಾರೆ. ಇದು ಅವರ ಅಂದು-ಇಂದು ಮತ್ತು ಮರಣ ಕವನಗಳಲ್ಲಿ ಕಾಣುತ್ತಿದೆ. ವಿದ್ಯಾರ್ಥಿಗಳಿಗೆ ಕಲಿಕಾ ಉತ್ಸಾಹ ತುಂಬುವ ಕೆಲಸವನ್ನು ಭವಿಷ್ಯ ಮತ್ತು ಸಂದೇಶ-ಸ್ಫೂರ್ತಿ ಕವನಗಳ ಮೂಲಕ ಮಾಡಿದ್ದಾರೆ.

ಲೀಲಾ ನಾಗೇಶ್ ಅವರ ಕಿರು ಕವನ 'ಮನಸಿನ ಭಾವನೆ'ಗಳಲ್ಲಿ ಕವನದ ಕಸುವಿದೆ, ಬದುಕಿನೋತ್ಸಾಹದ ಭಾವನೆಗಳನ್ನು ಪದಗಳಲ್ಲಿ ಬಣ್ಣಿಸುವ ಪ್ರಯತ್ನವನ್ನು ಕವಯತ್ರಿ ಮಾಡಿದ್ದಾರೆ. ಮಂಜುಳ ಅವರ 'ಯಾವುದು ಈ ಫಲ' ರಾಮ ಫಲ ಮತ್ತು ಸೀತಾಫಲದ ಬಗ್ಗೆ ಹೇಳುತ್ತಿದೆ.

ಹೆಣ್ಣಿನ ಮೇಲೆ ನಡೆಯುತ್ತಿರುವ ದೈಹಿಕ ದೌರ್ಜನ್ಯದ ಬಗ್ಗೆ ಸಹಜವಾಗಿಯೇ ಕವಯತ್ರಿ ನವ್ಯಶ್ರೀ ಧರಣೇಶ್ ತಮ್ಮ 'ಹೆಣ್ಣು' ಕವನದಲ್ಲಿ ತಮ್ಮ ಆಕ್ರೋಶ ಹೊರಹಾಕಿದ್ದಾರೆ. 'ಹೆಣ್ಣಲ್ಲವೇ ನಮ್ಮನ್ನೆಲ್ಲಾ ಹಡೆದವಳು, ಹೆಣ್ಣಲ್ಲವೇ ನಮ್ಮನೆಲ್ಲಾ ಪೊರೆವ ತಾಯಿ' ಎನ್ನುವ ಸಂಚಿ ಹೊನ್ನಮ್ಮನ ಆಶಯಕ್ಕೆ ಪೂರಕವಾಗಿ ಆರಂಭವಾಗುವ ಕವನ 'ನಿನ್ನಂತ ನೀಚ ನಿಕೃಷ್ಠ ಮನಕ್ಕೆ ಕಂಡಲ್ಲೆ ಗುಂಡು ಹೊಡೆಯಬೇಕು' ಎನ್ನುವ ಮೂಲಕ ಆಕ್ರೋಶದ ಸಿಡಿಗುಂಡಾಗುತ್ತದೆ.

ಶಿಕ್ಷಕ ಅಭಿಷೇಕ್ ದೇವಲಾಪುರ ಅವರ 'ಸಂಕ್ರಾಂತಿ' ಗಮನಾರ್ಹ ಕವನ. ಸಂಕ್ರಾಂತಿ ಹಬ್ಬದ ಸಂಭ್ರಮಾಚರಣೆಯನ್ನು ಬಣ್ಣಿಸುತ್ತಲೇ ಆರಂಭವಾಗುವ ಕವನ 'ಎಲ್ಲರ ಮನದಲ್ಲಿ ಮೂಡಲಿ ಶಾಂತಿ ಎಲ್ಲರ ಬಾಳನು ಬೆಳಗಲಿ ಸಂಕ್ರಾಂತಿ' ಎನ್ನುವ ತುಂಬು ಹೃದಯದ ಹಾರೈಕೆಯೊಂದಿಗೆ ಅಂತ್ಯಗೊಂಡಿದೆ.

ಪ್ರಥಮ ಪಿ.ಯು. ವಿದ್ಯಾರ್ಥಿನಿ ಮೋನಿಕಾ ಅವರ 'ಪುಸ್ತಕ' ಉತ್ತಮ ಪ್ರತಿಮಾತ್ಮಕ ಕವನ "ಇರುವಂತಿದ್ದರೆ ಪುಸ್ತಕದಂತೆ ಇರು" ಎನ್ನುವ ಸಾಲುಗಳ ಮೂಲಕ ಆರಂಭವಾಗುವ ಕವನ ಪುಸ್ತಕದ ಮಹತ್ವವನ್ನು ಸಾರುತ್ತಲೇ ಅದಕ್ಕೊಂದು ವ್ಯಕ್ತಿಗತ ಸ್ವರೂಪವನ್ನು ನೀಡುತ್ತಿದೆ. ಕವಯತ್ರಿಯ ಪರಿಕಲ್ಪನೆ ಮೆಚ್ಚುವಂತದ್ದು.

ದ್ವಿತೀಯ ಪಿ.ಯು. ವಿದ್ಯಾರ್ಥಿನಿ ಬಿಂದು ಬೊಮ್ಮನಾಯಕನಹಳ್ಳಿ ಅವರ 6 ಚುಟುಕುಗಳು ವೈವಿದ್ಯಮಯವಾದ ಚಿಂತನಾ ಲಹರಿಗಳನ್ನು ಹೊಂದಿವೆ. ಬಹುತೇಕ ಚುಟುಕುಗಳು ಗದ್ಯ ಸ್ವರೂಪದಲ್ಲಿದ್ದರೂ ಕವಯತ್ರಿಯ ಲೋಕಜ್ಞಾನ ಅನಾವರಣಗೊಂಡಿದೆ. ಅಪ್ಪ, ಅಮ್ಮ ಮತ್ತು ಅಣ್ಣನ ಬಗೆಗಿನ ವ್ಯಾಖ್ಯಾನ ಗಮನಾರ್ಹ.

9ನೇ ತರಗತಿ ವಿದ್ಯಾರ್ಥಿ ಕೆ.ಬಿ.ನವೀನ್ ಅವರ ಹನಿಗವನಗಳು ಅವರ ವಯೋ ಪ್ರಬುದ್ಧತೆಯನ್ನು ಮೀರಿ ನಿಂತಿವೆ. 'ಅಮ್ಮ' ಕವನದಲ್ಲಿ ತಾಯಿಯ ವಾತ್ಸಲ್ಯವನ್ನ ಹಿಡಿದಿಡಲು ಪ್ರಯತ್ನಿಸಿರುವ ಕವಿ ರೈತ ಕುಟುಂಬಕ್ಕೆ ಸೇರಿದಂತಿದೆ. ಇದರ ಪರಿಣಾಮ ಸಹಜವಾಗಿಯೇ 'ಸಾಲ' ಕವನ ಅನ್ನದಾತನ ಬಗ್ಗೆ ಹೇಳುತ್ತದೆ. ದೇಶದ ಆರ್ಥಿಕತೆಯ ಬೆನ್ನೆಲುಬಾದ ರೈತ ಸಾಲಗಾರನಾಗಿಯೇ ಇರುತ್ತಾನೆಂಬುದನ್ನ ಕವಿಯ ಮತ್ತೊಂದು ಹನಿಗವನ ನಿರೂಪಿಸುತ್ತದೆ.

"ಅಹಂಕಾರ ದುಡ್ಡಿರುವ ತನಕ
ಬಡತನ ಶ್ರೀಮಂತಿಕೆ ಬರುವ ತನಕ
ಸಂಬಂಧಿಕರು ಹೊಂದಾಣಿಕೆ ಇರುವ ತನಕ
ಆದರೆ ಪ್ರೀತಿ ವಾತ್ಸಲ್ಯ ಸಾಯುವ ತನಕ"

ಎನ್ನುವ ಹನಿಗವನ ಮಾನವ ಸಂಬಂಧಗಳ ಮಹತ್ವವನ್ನು ಸಾರುತ್ತಿದೆ.

10ನೇ ತರಗತಿ ವಿದ್ಯಾರ್ಥಿನಿ ಉಮಾದೇವಿ ಅವರ 'ನಾಟ್‌ರೀಚಬಲ್' ಕವನ ಗಮನಾರ್ಹ. ಕಾವ್ಯಕಟ್ಟುವ ಕಲೆ ಈಕೆಗೆ ಸಿದ್ದಿಯಾಗುತ್ತಿದೆ. ಮತ್ತಷ್ಟು ಕಸುವು ಪಡೆದರೆ ಈಕೆ ಉತ್ತಮ ಕವಯತ್ರಿಯಾಗಬಹುದು. ಅನ್ಯರ ಕಷ್ಟಗಳಿಗೆ ಕೈಯಿಡಿಯದ ದೈವವನ್ನು ನಿರಾಕರಿಸುವ ಕವಯತ್ರಿ 'ತನ್ನನ್ನು ತಾನು ಯಾರೆಂದು ತಿಳಿ, ನಿನಗೆ ನೀನೇ ದೇವರಾಗುತ್ತೀಯ' ಎನ್ನುವ ಮೂಲಕ ನಮ್ಮ ಅರಿವಿನ ಶಕ್ತಿಯೇ ಬದುಕಿನ ಶಕ್ತಿ ಎನ್ನುವುದನ್ನು ಸಾರುತ್ತಾರೆ.

8ನೇ ತರಗತಿ ವಿದ್ಯಾರ್ಥಿನಿ ಅರ್ಚನ ಅವರ ಹನಿಗವನಗಳು ನಿಜಕ್ಕೂ ಗಮನಾರ್ಹ. ಅಪ್ಪನನ್ನ ಪದಗಳಲ್ಲಿ ಕಟ್ಟಿಕೊಡುವ ಪರಿಕಲ್ಪನೆ ಅದ್ಭುತ. ಭೂಮಿ ಆಕಾಶಗಳನ್ನ ಮೀರಿ ಈಕೆಯ ಪರಿಕಲ್ಪನೆಯಲ್ಲಿ ಅಪ್ಪ ಬೆಳೆದು ನಿಂತಿದ್ದಾನೆ. ಈಕೆಯ ಎಲ್ಲಾ ಚುಟುಕುಗಳು ಎಳೆಯ ವಯಸ್ಸಿನಲ್ಲಿಯೇ ಗಳಿಸಿರುವ ಲೋಕ ಜ್ಞಾನವನ್ನು ಸಾದರಪಡಿಸುತ್ತಿವೆ.

ಸಾಕಷ್ಟು ಬಾಲ ಪ್ರತಿಭೆಗಳು ಸಹಜವಾಗಿಯೇ ಅಮ್ಮನನ್ನು ಕುರಿತು ಹಾಡಿವೆ. 7ನೇ ತರಗತಿ ವಿದ್ಯಾರ್ಥಿ ಜೀವನ್‌ಕುಮಾರ್

'ತಾಯಿ ಹಾಡಿದ ಜೋಗುಳದ ಗೀತೆ
ತಾಯಿ ಪ್ರೀತಿಯು ಮುಗಿಯದ ಕವಿತೆ'

ಎಂದರೆ 4ನೇ ತರಗತಿಯ ಹನ್ಸಿಕಾ ಶೆಟ್ಟಿ 'ನನ್ನ ಅಮ್ಮನಿಗೆ ನಾನೆ ಕನಸು' ಎನ್ನುವ ಮೂಲಕ ಮಕ್ಕಳ ಜೊತೆ ಜೊತೆಯಲ್ಲಿಯೇ ಬೆಳೆಯುತ್ತಿರುವ ಪೋಷಕರ ಕನಸುಗಳು ಮತ್ತು ಅದನ್ನ ಈಡೇರಿಸುವ ಹಂಬಲವನ್ನು ಅಮ್ಮ ಹನಿಗವನದಲ್ಲಿ ಧ್ವನಿಸಿದ್ದಾರೆ. ಹನ್ಸಿಕಾ ಶೆಟ್ಟಿ ಅವರ 'ರೈತ' ಎಂಬ ಕವನ ಪ್ರೌಢ ಚಿಂತನೆಗಳನ್ನು ಒಳಗೊಂಡಿದ್ದರೆ, ಜೀವನ್‌ಕುಮಾರ್ ಅವರ 'ಪರಿಸರ' ಗೀತೆ ಎಳೆಯ ವಯಸ್ಸಿನಲ್ಲಿಯೇ ಮೈದುಂಬಿಕೊಂಡಿರುವ ಅವರ ಗಿಡ ಮರಗಳ ಪರವಾದ ಕಾಳಜಿಯನ್ನು ಅಭಿವ್ಯಕ್ತಿಸಿದೆ.

ಎಂ.ಜೆ.ಪುಣ್ಯಶ್ರೀ ಅವರ 'ಸಂಕ್ರಾಂತಿ' ಕವನ ಹಬ್ಬದ ಸಂಭ್ರಮವನ್ನು ಬಣ್ಣಿಸಿದ್ದಾರೆ. ಆರ್.ದೀಪಾಂಜಲಿ ಅವರ 'ಮಾತು ಕಲಿಸಿದ ತಾಯಿಗೆ' ಹಾಗೂ ಕುಶಾಲ್ ಮೋಹನ್‌ಗೌಡ ಮತ್ತು ಬಿ.ಎಂ.ಹೇಮ ಅವರ 'ಅಮ್ಮ'ನನ್ನು ಕುರಿತ ಕವನಗಳು ವಾತ್ಸಲ್ಯಮಹಿಯಾದ ಅಮ್ಮ ವ್ಯಕ್ತಿತ್ವವನ್ನ ಚಿತ್ರಿಸುತ್ತವೆ.

ವಿಶೃತ ರವಿ ಅವರ 'ನನ್ನ ಅಪ್ಪ' ಕವನ ಅಪ್ಪನ ವ್ಯಕ್ತಿತ್ವ ಮತ್ತು ಅವಶ್ಯಕತೆಯನ್ನು ಅಭಿವ್ಯಕ್ತಿಸುತ್ತಲೇ ಅಪ್ಪನ ಮೇಲಿನ ಪ್ರೀತಿಗೆ ಅಕ್ಷರಬಂಧ ನೀಡಿದೆ. ವೈ.ಸೌಜನ್ಯ ಅವರ 'ಜೀವನದ ಓಟ' ಮತ್ತು ಹಾದಿಯ ಅವರ ಚುಟುಕುಗಳು ಅವರೊಳಗೆ ಅಡಗಿರುವ ಕವಿತಾ ಶಕ್ತಿಯನ್ನ ಹೊರಚಿಮ್ಮಿಸಿವೆ.

ಕೆಲವೊಂದು ಕವನಗಳನ್ನು ಹೊರತುಪಡಿಸಿದರೆ ಬಹುತೇಕ ಕವನಗಳು ಗಮನಸೆಳೆಯುತ್ತವೆ. ಇಲ್ಲಿನ ಬಹುತೇಕ ಕವಿಗಳಿಗೆ ಕವಿತಾ ಶಕ್ತಿಯಿದೆ. ಇವೆಲ್ಲವೂ 'ಅರುಳು ಪ್ರತಿಭೆ'ಗಳು. ಒಂದಷ್ಟು ಹದ ಮಾಡಿದರೆ ನಾಡಿನ ಗಮನಾರ್ಹ ಕವಿಗಳಾಗುವ ಶಕ್ತಿ ಇವರಲ್ಲಿದೆ.

**ಎಂ.ಕೆ.ಹರಿಚರಣ್ ತಿಲಕ್**
ಕವಿಗೋಷ್ಠಿ ಅಧ್ಯಕ್ಷರು
ಮಾಜಿ ಅಧ್ಯಕ್ಷರು
ಕೃಷ್ಣರಾಜಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್

# ಕವನ ಗುಚ್ಛ


| | | |
|---|---|---|
| 1. ಸಂಕ್ರಾಂತಿ– ಪುಣ್ಯಶ್ರೀ ಎಂ.ಜೆ. | – | 14 |
| 2. ಅಮ್ಮ–ಕುಶಾಲ್ ಮೋಹನ್‌ಗೌಡ | – | 15 |
| 3. ನನ್ನ ಉಸಿರು ಅಮ್ಮ– ಮೇಘಶ್ರೀ ಹೆಚ್.ಎನ್. | – | 16 |
| 4. ರೈತ – ಹನ್ಸಿಕಾ ಶೆಟ್ಟಿ | – | 17 |
| 5. ಸ್ವರ್ಗಕ್ಕಿಂತಲೂ ಮಿಗಿಲು ಅಮ್ಮ – ಹೇಮ ಜಿ.ಎಂ. | – | 18 |
| 6. ಜೀವನದ ಓಟ – ಸೌಜನ್ಯ ವೈ. | – | 19 |
| 7. ಮಾಣಿಕ್ಯ ನನ್ನಮ್ಮ – ದೀಪಾಂಜಲಿ ಆರ್. | – | 20 |
| 8. ಹನಿಗವನಗಳು – ಹಾದಿಯ | – | 21 |
| 9. ನನ್ನ ಅಪ್ಪ– ವಿಶೃತ ರವಿ | – | 22 |
| 10. ಹನಿಗವನಗಳು – ಪ್ರೀತಂ ಟಿ.ಪಿ | – | 23 |
| 11. ನಾನೊಂದು ನೊಂದ ಮರ – ಜೀವನ್‌ಕುಮಾರ್ | – | 24 |
| 12. ಪ್ರೀತಿಯ ಸಾಹುಕಾರ ನನ್ನ ಅಪ್ಪ – ಅರ್ಚನ | – | 26 |
| 13. ಹನಿಗವನಗಳು – ನವೀನ್ ಕುಪ್ಪಹಳ್ಳಿ | – | 28 |
| 14. ನಾಟ್‌ರೀಚಬಲ್ – ಉಮಾದೇವಿ | – | 30 |
| 15. ಹನಿಗವನಗಳು : ಪುಸ್ತಕ ಮತ್ತು ಬಯಕೆ – ಮೋನಿಕಾ ಭೇರ್ಯ | – | 31 |
| 16. ಹನಿಗವನಗಳು – ಬಿಂದು ಬೊಮ್ಮನಾಯಕನಹಳ್ಳಿ | – | 32 |
| 17. ಕಾಲೇಜು ರಂಗ – ಶಾಂತಲ ಅಂಬರಹಳ್ಳಿ | – | 34 |
| 18. ಯಾವುದು ಈ ಫಲ – ಮಂಜುಳ ಸೋಮಶೇಖರ್ | – | 36 |
| 19. ಮನಸ್ಸಿನ ಭಾವನೆ – ಲೀಲಾ ನಾಗೇಶ್ | – | 38 |
| 20. ಸಂಕ್ರಮಣ – ಅಭಿಷೇಕ್ ದೇವಲಾಪುರ | – | 39 |
| 21. ಹೆಣ್ಣು – ನವ್ಯಶ್ರೀ ಧರಣೇಶ್ | – | 41 |
| 22. ನಾಝಿಜಂ– ವಜ್ರಪ್ರಸಾದ್ ಹೆಚ್.ಎನ್. | – | 42 |



**ಪುಣ್ಯಶ್ರೀ ಎಂ.ಜೆ.**
**3ನೇ ತರಗತಿ**

# ಸಂಕ್ರಾಂತಿ

ಹಬ್ಬ ಬಂತು ಹಬ್ಬ
ವರ್ಷದ ಮೊದಲನೇ ಹಬ್ಬ
ಹೊಸ ವರುಷದ ಸಂಕ್ರಾಂತಿ ಹಬ್ಬ
ಸುಗ್ಗಿಯ ಹಿಗ್ಗಿನ ಸ್ವಾಗತದಿ ॥

ಬಳಲಿದ ಮನಸಿಗೆ ಸಿಹಿಯನು ಉಣಿಸುತಾ
ಮುಂದಿನ ಬದುಕಿಗೆ ಬೆಳಕಾಗಲಿ
ನಾಡಿನ ಜನತೆಗೆ ಸಂತಸ ತರಲಿ
ಬಂಧು ಬಳಗದ ಸ್ನೇಹ ಕೂಟಕ್ಕೆ ॥

ಎಳ್ಳು-ಬೆಲ್ಲವ ಹಂಚುತಾ ಸಾಮರಸ್ಯವು ಬೆಳೆಯಲಿ
ಕಬ್ಬಿನ ಸಿಹಿಯ ಮಕ್ಕಳ ಕನಸು
ನೆನಪಿನ ಶಿಖರಕ್ಕೆ ಏರಲಿ
ಹಬ್ಬದ ಹರುಷದ ಪ್ರೀತಿಯ ಹೊನಲು ॥

ಮನಸು-ಮನಸುಗಳು ಬೆಸೆಯಲಿ
ಸಂಕ್ರಾಂತಿಯ ಹೊಸ ವರುಷದ ಹಬ್ಬ
ನಾಡಿನ ಜನತೆಗೆ ಹರ್ಷವ ನೀಡಲಿ
ಎಲ್ಲರೂ ಸೇರಿ ನಲಿಯಲಿ ॥



**ಕುಶಾಲ್ ಮೋಹನ್‌ಗೌಡ**
**3ನೇ ತರಗತಿ**

# ಅಮ್ಮ

ಹುಟ್ಟುವಾಗ ಅಮ್ಮ
ಅಳುವಾಗ ಅಮ್ಮ
ನಗುವಾಗ ಅಮ್ಮ
ಬಿದ್ದಾಗ ಅಮ್ಮ ॥

ನಾವು ಎಲ್ಲಿದ್ದರು ಯಾವಾಗಲೂ ಜೊತೆ ಇರುತ್ತಾರೆ ಅಮ್ಮ
ಕಾರಣ ಅವರಿಂದಲೇ ಸಿಕ್ಕಿದೆ ನಮಗೆ ಈ ಜನ್ಮ ॥



**ಮೇಘಶ್ರೀ ಹೆಚ್.ಎನ್**
**3ನೇ ತರಗತಿ**

# ನನ್ನ ಉಸಿರು ಅಮ್ಮ

ಅಮ್ಮ ನೀನು ನನ್ನ ಉಸಿರು
ನನಗೆ ಜನ್ಮ ಕೊಟ್ಟ ದೇವರು
ಪ್ರೀತಿ ಕರುಣೆಯಿಂದ ನನ್ನ ಬೆಳೆಸಿ
ಜೀವನ ರೂಪಿಸುವ ದೇವತೆ ॥

ನನ್ನ ನಗುವಿನಲ್ಲಿ ಅಳುವಿನಲ್ಲಿ
ನೋವಿನಲ್ಲಿ ನಲಿವಿನಲ್ಲಿ
ಪ್ರತಿಯೊಂದರಲ್ಲಿ ನೀನಿರುವೆ
ನಾ ಕೊಟ್ಟ ಕಷ್ಟಗಳನ್ನೆಲ್ಲ ಸಹಿಸಿ ॥

ನನ್ನ ತಪ್ಪುಗಳನೆಲ್ಲ ಮನ್ನಿಸಿ
ನಿನ್ನ ನಗುವಿನಲ್ಲಿ ನನ್ನನ್ನು ಕಾಣು
ನನ್ನ ಅಮ್ಮ ಮುದ್ದು ಅಮ್ಮ
ಎಂದೆಂದಿಗೂ ನೀ ನನ್ನ ಜೊತೆಯೇ ಇರು ॥



**ಹನ್ಸಿಕಾ ಶೆಟ್ಟಿ**
**4ನೇ ತರಗತಿ**

# ಅಮ್ಮ

ನನ್ನ ಅಮ್ಮನಿಗೆ ನಾನೇ ಕನಸು
ಆ ಕನಸ್ಸನ್ನು ಮಾಡಬೇಕು ನನಸು,
ನನಸು ಮಾಡಲು ನಾನು ಮಾಡಬೇಕು ಮನಸ್ಸು
ನನಗೆ ಬೇಕು ಎಲ್ಲಾ ಗುರು ಹಿರಿಯರ ಹರಸ್ಸು ॥

# ರೈತ

ರೈತ ನಮ್ಮ ದೇಶದ ಬೆನ್ನೆಲುಬು
ಬಲಿಷ್ಠವಾಗಬೇಕು ಮೊದಲು ಅವನ ಎಲುಬು
ರೈತ ನಮ್ಮೆಲ್ಲರ ಜೀವದ ಜೀವ
ಅವನಿಲ್ಲದೆ ನಾವೆಲ್ಲರೂ ನಿರ್ಜೀವ ॥

ತಂತ್ರಜ್ಞರು ನೀಡುವರು 4ಜಿ 5ಜಿ
ರೈತನೊಬ್ಬನೆ ನೀಡುವನು ಗಂಜಿ ॥
ಜೀವನದಲ್ಲಿ ಪಡುವನು ಬಹಳಷ್ಟು ಕಷ್ಟ
ಅನುಭವಿಸುವನು ಬೆಳೆಯಿಂದ ನಷ್ಟ ॥

ರೈತನ ಆತ್ಮಹತ್ಯೆಯನ್ನು ತಡೆಗಟ್ಟೋಣ
ರೈತನನ್ನು ನಾವೆಲ್ಲರೂ ರಕ್ಷಿಸೋಣ ॥



**ಹೇಮ ಜಿ ಎಂ**
**6ನೇ ತರಗತಿ**

# ಸ್ವರ್ಗಕ್ಕಿಂತಲೂ ಮಿಗಿಲು ಅಮ್ಮ

ನಾ ಏನು ಕೇಳಿದರು ಇಲ್ಲ
ಎನ್ನುವುದಿಲ್ಲವಮ್ಮ
ಅವಳ ಚೆಂದದ ಊಟ ತುಂಬ ಸೊಗಸಮ್ಮ
ಸವಿಯುತ್ತಿದ್ದರೆ ಅವಳ ಕೈತುತ್ತು ಅಮೃತವಮ್ಮ
ಸ್ವರ್ಗಕ್ಕಿಂತಲೂ ಮಿಗಿಲು ನನ್ನ ಅಮ್ಮ
ಲವ್ ಯು ಎವರ್ ಅಮ್ಮ ॥



**ಸೌಜನ್ಯ ವೈ**
**6ನೇ ತರಗತಿ**

## ಜೀವನದ ಓಟ

ಬಣ್ಣಗಳ ಜೊತೆ ಆಟ
ಮಕ್ಕಳ ಜೊತೆ ಪಾಠ
ಚಿತ್ರಗಳ ಜೊತೆ ನೋಟ
ಹೊಟ್ಟೆ ತುಂಬಲು ಊಟ
ನಿಲ್ಲದೆ ಸಾಗುವ ಓಟ
ಈ ಜೀವನವೇ ಜಂಜಾಟ ॥



**ದೀಪಾಂಜಲಿ ಆರ್.**
**6ನೇ ತರಗತಿ**

# ಮಾಣಿಕ್ಯ ನನ್ನಮ್ಮ

ಹೆಸರಲ್ಲೇ ಇರುವುದು ನಿನ್ನ ಸೌಮ್ಯ
ಜಗತ್ತಿನಲ್ಲೇ ಸಿಗಲಾರದ ಕೂಸು ನೀನಮ್ಮ
ಹೂವಿನಷ್ಟೇ ಮಧುರ ನಿನ್ನ ಮನಸ್ಸಮ್ಮ
ಜೇನಿಗಿಂತಲೂ ಸಿಹಿ ನಿನ್ನ ನಗುವಮ್ಮ
ಜೀವನದಲ್ಲಿ ಮತ್ತೆಂದಿಗೂ ಸಿಗದ ಮಾಣಿಕ್ಯ
ನನ್ನಮ್ಮ ॥




**ಹಾದಿಯಾ**
**6ನೇ ತರಗತಿ**

# ಮರ

ಮರ ನಮಗೆ ನೆರಳು ಕೊಡುತ್ತದೆ
ಮರ ನಮಗೆ ಹಣ್ಣು ಕೊಡುತ್ತದೆ
ಮರ ಒಂದು ಮರವಲ್ಲ
ಮರ ಒಂದು ದೇವರು ॥

# ಗುರಿ

ಮುಂಜಾನೆ ಮುಖದಲ್ಲಿ ನಗುವಿರಲಿ
ಹೃದಯದಲ್ಲಿ ಪ್ರೀತಿ ಇರಲಿ
ಬೇರೆಯವರ ಮನಸ್ಸಿನಲ್ಲಿ ನಮ್ಮ ಮೇಲೆ
ವಿಶ್ವಾಸವಿರಲಿ
ಆದರೆ ಜೀವನದಲ್ಲಿ ಒಂದು ಗುರಿ ಇರಲಿ ॥



**ವಿಶ್ರುತ ರವಿ**
**6ನೇ ತರಗತಿ**

# ನನ್ನ ಅಪ್ಪ

ಅಪ್ಪ ಅಪ್ಪ ನನ್ನ ಮುದ್ದಿನ ಅಪ್ಪ
ಅಪ್ಪನೇ ನನ್ನ ಪ್ರಪಂಚವಪ್ಪ
ಅಪ್ಪನ ಗುಣ ಸಾಗರಕ್ಕಿಂತ ದೊಡ್ಡದಪ್ಪ
ಅಪ್ಪನೆಂದರೆ ನನಗೆ ದುಡ್ಡಿನ ಗಣಿಯಪ್ಪ ॥

ಅಪ್ಪನಿದ್ದರೆ ಜೊತೆಯಲ್ಲಿ ಯಾರು ಬೇಡಪ್ಪ
ಅಪ್ಪ ನನ್ನ ಬೇಕು ಬೇಡಗಳನ್ನು ನೀಗಿಸುವನಪ್ಪ
ಅಪ್ಪ ನನಗೆ ಧನಕನಕಗಳಿಗಿಂತ ದೊಡ್ಡವನಪ್ಪ
ಅಪ್ಪ ನನ್ನ ಜೀವನದ ಪ್ರತಿಕ್ಷಣದಲ್ಲೂ ಜೊತೆಗಿರಲಪ್ಪ ॥

ನನ್ನ ಜೀವನ ಅವನಿಗೆ ಮುಡುಪಾಗಿಡುತ್ತೇನಪ್ಪ
ಸಕಲ ದೇವರುಗಳನ್ನು ಅವನಲ್ಲಿ ಕಾಣುತ್ತೀನಪ್ಪ
ಅಪ್ಪನೇ ನನ್ನ ಜೀವನದ ಸಾಕಾರ ಮೂರ್ತಿಯಪ್ಪ
ಎಂದಿಗೂ ಎಂದೆಂದಿಗೂ ಲವ್ ಯು ಅಪ್ಪ ಅಪ್ಪ ॥



ಪ್ರೀತಮ್ ಟಿ.ಪಿ
6ನೇ ತರಗತಿ

## ಜೀವನದ ಬೆಲೆ

ದುಡಿಯೋರಿಗೆ ಗೊತ್ತು ಮಣ್ಣಿನ ಬೆಲೆ
ಹೆತ್ತವರಿಗೆ ಗೊತ್ತು ಹೆಣ್ಣಿನ ಬೆಲೆ
ಬಡವರಿಗೆ ಗೊತ್ತು ದುಡ್ಡಿನ ಬೆಲೆ
ಈ ಮೂರು ತಿಳಿದವನಿಗೆ ಗೊತ್ತು
ಜೀವನದ ಬೆಲೆ..

## ಸ್ನೇಹ

ಗುಲಾಬಿಯಂತೆ ಪ್ರೀತಿ
ಸಂಪಿಗೆಯಂತೆ ನಗು
ಮಲ್ಲಿಗೆಯಂತೆ ಹೃದಯ
ಸೇವಂತಿಗೆಯಂತೆ ಕನಸು
ಆ ಕನಸಿನ ಅರಮನೆಯಲ್ಲಿ
ನಮ್ಮ ನಿಮ್ಮ ಸ್ನೇಹ ಸದಾ ನಗುತಿರಲಿ



**ಜೀವನ್ ಕುಮಾರ**
**7ನೇ ತರಗತಿ ಕನ್ನಡ ಮಾಧ್ಯಮ**

## ನಾನೊಂದು ನೊಂದ ಮರ

ಎಲ್ಲೋ ಹಕ್ಕಿ ಹಣ್ಣು ತಿಂದು
ಎಸೆದ ಬೀಜ ನಾನು ॥

ಮೊಳಕೆಯೊಡೆದು ಸಸಿಯಾಗಿ ಬೆಳೆದೆ
ದಾರಿಯಲ್ಲಿ ಕಂಡ ಮನುಜ
ನೀ ನನ್ನ ಮನೆ ಮುಂದೆ ಬೆಳೆಸಿದೆ
ತಾಯಿ ಪ್ರೀತಿ ನೀಡಿ ॥

ನೀ ನೀರು ಸುರಿದಾಗ
ನಾನೆಷ್ಟು ಖುಷಿ ಪಟ್ಟೆ
ಆ ಖುಷಿಯಲ್ಲೇ ನಾ ನಿನಗೆ
ಸಕಾಲಕ್ಕೆ ಹೂ–ಹಣ್ಣು ಕೊಟ್ಟೆ ॥

ನಿನ್ನ ಮಕ್ಕಳು
ಹಣ್ಣು ಕೀಳಲು ಕಷ್ಟಪಡುವಾಗ
ನೀ ಕಡಿದೆ
ಆ ನೋವಿನಲ್ಲಿ ಬಳಲಿದೆ ॥

ಸಕಾಲಕ್ಕೆ ಹೂ–ಹಣ್ಣು
ನೀಡಲು ಅಶಕ್ತನಾದೆ.
ಹಣ್ಣು ನೀಡದ ನನ್ನ ಕಡಿದೆ
ಸೌದೆ ಮಾಡಿ ॥

ಅದರಲ್ಲೂ ಸಂಪಾದಿಸಿದೆ
ಈಗ ನಾನು ಒಂದು
ನೊಂದ ಮರ ॥

ನಾ ದಾರಿಯಲ್ಲೇ
ಬೆಳೆದು ಮರವಾಗುತ್ತಿದ್ದರೆ
ಹಕ್ಕಿಗಳಿಗೆ ಹಣ್ಣು ನೀಡುತ್ತಾ
ಸುಖವಾಗಿರುತ್ತಿದ್ದೆ ॥

ಹಣ್ಣು ನೀಡಿಲ್ಲವೆಂದು
ಹಕ್ಕಿಗಳು ಕುಕ್ಕುತ್ತಿರಲಿಲ್ಲ
ಎತ್ತರ ಬೆಳೆದೆ ಎಂದು
ಕಡಿದು ಹಾಕುತ್ತಿರಲಿಲ್ಲ ॥

ಈಗ ನಾನು ಒಂದು
ನೊಂದ ಮರ ॥



**ಅರ್ಚನ**
**8ನೇ ತರಗತಿ**

# ಪ್ರೀತಿಯ ಸಾಹುಕಾರ ನನ್ನ ಅಪ್ಪ

ನಾ ಧರೆಗಿಳಿದು ಬಂದ ಕ್ಷಣ ಸಿಹಿ ಹಂಚಿದ ವೀರ
ನಾ ಅಂಬೆಗಾಲು ಇಡುವಾಗ ಕಣ್ಣಲ್ಲಿತ್ತು ಪ್ರೀತಿ
ಅಪಾರ
ತನ್ನ ಮನದಲ್ಲಿ ಅಡಗಿದ್ದರೂ ಕಷ್ಟದ ಭಾರ
ನಾ ಕೇಳಿದ್ದನ್ನೆಲ್ಲಾ ಕೊಡಿಸುತ್ತಿದ್ದ ಸಾಹುಕಾರ ನನ್ನ
ಅಪ್ಪ ॥

ನನ್ನ ಅಪ್ಪ ತಲೆ ಎತ್ತಿ ನೋಡೊ
ಆಕಾಶನು ಅಲ್ಲ
ತಲೆ ತಗ್ಗಿಸಿ ನೋಡೊ
ಭೂಮಿನು ಅಲ್ಲ ॥

ನನ್ನ ಅಪ್ಪ
ದೇವಸ್ಥಾನದ ಗೋಪುರದ
ಮೇಲೆ ಇರೋ ಕಳಸದ ತರ
ನೋಡಿ ಕೈ ಎತ್ತಿ ಮುಗಿಬೇಕು ॥

## ಅಮ್ಮನ ಋಣ

ಹೋಟೆಲ್ ಊಟ ಮಾಡೋಕೆ
ಹಣ ಬೇಕು
ಅಮ್ಮನ ಕೈ ತುತ್ತು
ತಿನ್ನೋಕೆ ಋಣ ಬೇಕು ॥

## ದುಡಿಮೆ

ಬರುವಾಗ ಒಂದು ಮಡಿಲು
ಅದು ಆ ದೇವರ ಮಹಿಮೆ
ಹೋಗುವಾಗ ನಾಲ್ಕು ಹೆಗಲು
ಅದು ನಮ್ಮ ಜೀವನದ ದುಡಿಮೆ..॥



**ನವೀನ್ ಕುಪ್ಪಹಳ್ಳಿ**
**9ನೇ ತರಗತಿ**

## ತಾಯಿಯ ನಗು

ಮಲ್ಲಿಗೆ ಮೊಗ್ಗೆ ಚೆನ್ನ
ಅರಳಿದ ಕಮಲವೇ ಚೆನ್ನ
ಸೂರ್ಯಕಾಂತಿಯ ಬಣ್ಣ ಚೆನ್ನ
ತಾಯಿಯೊಬ್ಬಳು ನಕ್ಕರೆ ಮಕ್ಕಳ ಬದುಕೆ
ಚೆನ್ನ ಚೆನ್ನ ಚೆನ್ನ ॥

## ಪ್ರೀತಿ

ಸೂರ್ಯನಿಗೆ ಸುವಾಸನೆಯಿಲ್ಲ
ಬೆಳಕಿಗೆ ಆಕಾರವಿಲ್ಲ
ಗಾಳಿಗೆ ಶೃಂಗಾರವಿಲ್ಲ
ತಂದೆ ತಾಯಿ ಮಕ್ಕಳ ಪ್ರೀತಿಗೆ
ಕೊನೆಯೇ ಇಲ್ಲ ॥

## ಅತಿ ಆಸೆ

ಹುಟ್ಟುವಾಗ ಏನನ್ನು ಹೊತ್ತುಕೊಂಡು ಬರುವುದಿಲ್ಲ
ಸಾಯುವಾಗ ಏನನ್ನು ಹೊತ್ತುಕೊಂಡು
ಹೋಗುವುದಿಲ್ಲ
ಆದರೆ ಜನರು ಬದುಕಿದ್ದಾಗ ಜೀವನದಲ್ಲಿ
ಅತಿ ಆಸೆಯನ್ನು ತೊರೆದು ಬಾಳುವುದೇ ಇಲ್ಲ ॥

## ರೈತ

ರೈತ ಅನ್ನ ಕೊಡುವ ದಾತನು
ಪಶು ಪಕ್ಷಿಗಳಿಗೆ ಆಹಾರ ನೀಡುವವನು
ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ನೀಡುವವನು
ದೇಶದ ಆರ್ಥಿಕತೆಯ ಬೆನ್ನೆಲುಬವನು ॥
ಆದರೆ ರೈತರು
ಸಾಲಗಾರರಾಗುವುದಕ್ಕೆ
ಕೊನೆಯೇ ಇಲ್ಲ ॥

## ವಾತ್ಸಲ್ಯ

ಅಹಂಕಾರ ದುಡ್ಡಿರುವ ತನಕ
ಬಡತನ ಶ್ರೀಮಂತಿಕೆ ಬರುವ ತನಕ
ಸಂಬಂಧಿಕರು ಹೊಂದಾಣಿಕೆ ಇರುವ ತನಕ
ಆದರೆ ಪ್ರೀತಿ, ವಾತ್ಸಲ್ಯ ಸಾಯುವತನಕ



**ಉಮಾದೇವಿ**
10ನೇ ತರಗತಿ

# ನಾಟ್ ರೀಚಬಲ್

ಕುಸಿದ ಬೆಟ್ಟ ಹಿಡಿಯಲು
ಕೃಷ್ಣ ಬರಲಿಲ್ಲ
ಕುಸಿದ ಸೇತುವೆ ಹಿಡಿಯಲು
ಹನುಮಂತ ಬರಲಿಲ್ಲ ॥

ಮನೆಗಳು ಕುಸಿಯದಂತೆ
ರಾಮ ಬಾಣ ಹೊಡೆಯಲಿಲ್ಲ
ಉಕ್ಕಿ ಹರಿವ ಪ್ರವಾಹ ಕುಡಿಯಲು
ಶಿವ ಬರಲಿಲ್ಲ ॥

ವಾಸಕ್ಕೆ ಮನೆ ಕಟ್ಟಿಕೊಳ್ಳಲು
ಲಕ್ಷ್ಮೀವೆಂಕಟೇಶ್ವರ ಸಾಲ ಕೊಡಲಿಲ್ಲ
ಹಗಲಿರುಳೆನ್ನದೆ ಪೂಜಿಸಿದ ಪ್ರಾರ್ಥಿಸಿದ
ದೇವರುಗಳು ಹೋದರೆಲ್ಲಿಗೆ ?

ಬಡವನು ಸಾಯುತಿರಲು
ವೇದನೆಯಲ್ಲಿ ನರಳುತಿರಲು
ಕರೆ ಮಾಡಿ ಹೇಳಲು
ರಕ್ಷಕನೇ ನಾಟ್ ರೀಚಬಲ್ ॥

ತನ್ನನ್ನು ತಾನು ಯಾರೆಂದು ತಿಳಿ
ನಿನಗೆ ನೀನೆ ದೇವರಾಗುತ್ತೀಯಾ
ಭೂಮಿಯ ಮೇಲೆ ನಿನ್ನನ್ನು ಕಾಪಾಡುವ
ಯಾವ ದೇವರುಗಳು ಇಲ್ಲ ॥



**ಮೋನಿಕಾ ಭೇರ್ಯ**
ಪ್ರಥಮ ಪಿ.ಯು.
(ವಾಣಿಜ್ಯ ವಿಭಾಗ)

## ಪುಸ್ತಕ

ಇರುವಂತಿದ್ದರೆ ಪುಸ್ತಕದಂತೆ ಇರು
ದೂರದಿಂದ ಕಂಡರೆ ನೀನೇನು ಎಂದು
ಅರಿವಾಗದಂತೆ
ನಿನ್ನಂತರಾಳ ಓದಿದಾಗಲೆ ಅರ್ಥವಾಗುವಂತೆ ॥
ಮುಖ ಪಟದಲ್ಲಿ ಮನ ಸಂಗತಿ ತಿಳಿಯದಂತೆ
ಜೊತೆ ಕಳೆದಾಗಲೇ ಪೂರ್ಣ ಮಾಹಿತಿ
ದೊರೆಯುವಂತೆ
ಇರು ಪುಸ್ತಕದಂತೆ ॥
ಜ್ಞಾನವಿದ್ದರೂ ಬೀಗದಂತೆ
ಆಸಕ್ತರು ಮಾತ್ರ ನಿನ್ನತ್ತ ಬಾಗುವಂತೆ
ಇರುವಂತಿದ್ದರೆ ಪುಸ್ತಕದಂತೆ ಇರು ॥

## ಬಯಕೆ

ಬಯಸಿದ್ದೆಲ್ಲ ಸಿಗುವಂತಿದ್ದರೆ
ಬಯಕೆಗೆ ಬೆಲೆ ಎಲ್ಲಿ ಇರುತ್ತಿತ್ತು
ಕಷ್ಟ ಎನ್ನುವ ಪದಕ್ಕೆ ವ್ಯಾಖ್ಯಾನವೇ ಇರುತ್ತಿರಲಿಲ್ಲ
ಸಂಬಂಧಗಳ ಸಂಚಲತೆ ಇರುತ್ತಿರಲಿಲ್ಲ ॥
ಸಾಧನೆ ಎನ್ನುವುದು
ಗ್ರಂಥಗಳ ಪುಟಗಳಲ್ಲೇ ಉಳಿಯುತ್ತಿತ್ತು
ಪ್ರಪಂಚವೇ... ಶೂನ್ಯವಾಗಿರುತ್ತಿತ್ತು ॥



**ಬಿಂದು ಬೊಮ್ಮನಾಯಕನಹಳ್ಳಿ**
ದ್ವಿತೀಯ ಪಿ.ಯು.ಸಿ.(ವಾಣಿಜ್ಯ ವಿಭಾಗ)

## ಉತ್ತರ

ಸಮಯವನ್ನು ವ್ಯರ್ಥ ಮಾಡಬೇಡ
ನಿನ್ನ ಆಯ್ಕೆಯಿಂದ ಇಡೀ ಜಗತ್ತನ್ನು
ಕೊಂಡುಕೊಳ್ಳುವ ಶಕ್ತಿ ನಿನ್ನಲ್ಲಿದೆ
ಪ್ರೀತಿಗಿಂತ ಹೆಚ್ಚು ಹಣವನ್ನು ಸಂಪಾದಿಸು
ಹಣವೆ ಎಲ್ಲ ಪ್ರಶ್ನೆಗಳಿಗೆ ಉತ್ತರ ॥

## ಮೌನ

ಎಷ್ಟೆಂದು ಸಹಿಸುವೆ ಕಷ್ಟಗಳನ್ನು
ಕಣ್ಣೀರಿಗೂ ತಿಳಿದಿದೆ ನಿನ್ನ ನೋವು
ಇದನ್ನೆಲ್ಲ ನೋಡುತ್ತಿರುವ ನಾನು
ಕ್ಷಣ ಮಾತ್ರ ಮೌನವಾಗಿರುವೆ.. ಅಮ್ಮ ॥

## ಸಮಯ

ಇಡೀ ಜಗತ್ತೇ ಹಣದ ಮೇಲೆ ನಿಂತಿದೆ
ಅದಕ್ಕೆ ಮನುಷ್ಯನಿಗೆ ಬೆಲೆ ಇಲ್ಲ
ಆದರೆ ಹಣಕ್ಕಿಂತ ಅಮೂಲ್ಯವಾದದ್ದು
"ಸಮಯ"
ಏಕೆಂದರೆ ಕಳೆದು ಹೋದ
ಸಮಯ ಮರಳುವುದಿಲ್ಲ ॥

## ಜೀವ

ಸಾವು ಎಂಬುವುದು ಎಷ್ಟು ಭಯಾನಕವೊ
ಆ ಸಾವನ್ನು ನೋಡುವುದು ಅಷ್ಟೇ ಭಯಾನಕ
ಅವರು ನಿನ್ನ ಶತ್ರುಗಳೇ ಆಗಿರಲಿ
ತಿಳಿಯದಂತೆ ನಿನ್ನ ಮನಸ್ಸು
ಒಂದು ಕ್ಷಣ ಹೇಳುವುದು
ಮರಳಿ ತರಬಾರದೇ
ಆ ಜೀವ ॥

## ಅಣ್ಣ

ಅಮ್ಮನ ಪ್ರೀತಿಯಂತೆ
ಅಪ್ಪನ ಧೈರ್ಯದಂತೆ
ಪ್ರೀತಿಯಿಂದ ತುಂಬಿದ
ಪರಿಸರ ನಿನ್ನ ಮನಸ್ಸು
ಆ ಪರಿಸರದ ಚಿಗುರೇ
ಈ ನಿನ್ನ ಪುಟ್ಟ ತಂಗಿ... ಅಣ್ಣ ॥

## ಸೃಷ್ಠಿ

ಸಮಯ ಬೇಗ ಕಳೆಯಲಿ
ಎಂದು ಎಣಿಸುವವರಿಂದ
ಏನೂ ಸಾಧ್ಯವಿಲ್ಲ.
ಸಮಯದ ಹಿಂದೆ ಓಡುವವನಷ್ಟೇ
ಇತಿಹಾಸ ಸೃಷ್ಟಿಸಲು ಸಾಧ್ಯ
ಇತಿಹಾಸ ಸೃಷ್ಟಿಸಿದವರು ಮಾತ್ರ
ಸಮಯವನ್ನು ಸಾಧನೆಯೆಂದು ತಿಳಿದವರು ॥



**ಶಾಂತಲಾ ಅಂಬರಹಳ್ಳಿ**
ಉಪನ್ಯಾಸಕಿ

# ಕಾಲೇಜು ರಂಗ

ಗ್ರಾಮಭಾರತಿ ವಿದ್ಯಾಸಂಸ್ಥೆಯೊಂದು ಪವಿತ್ರ ದೇಗುಲ
ನಿಸ್ವಾರ್ಥತೆಯ ವಿದ್ಯಾದಾನದ ಗುರುಕುಲ
ಇಲ್ಲಿದೆ ಎಲ್ಲಾ ಸದ್ಗುರುಗಳ ಶ್ರಮದ ಫಲ
ವಿದ್ಯಾರ್ಥಿಗಳೇ ನೀವು ಪಡೆದರೆ ಇದರ ಅನುಕೂಲ
ಸಿಗುವುದು ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ
ಖಂಡಿತ ನೀವಾಗುವಿರಿ ಜಯಶೀಲ ॥

ಎಸ್.ಎಂ.ಎಲ್ ಪಿಯುಸಿ ಎಂಬ ಕಾಲೇಜುರಂಗ
ಸಿಹಿ–ಕಹಿ–ಹುಳಿ ತುಂಬಿರುವ ಬಗೆಬಗೆಯ ಹಣ್ಣಿನಾಂಗ
ತುಂಬಿದೆ ಎಲ್ಲಾ ವಿದ್ಯಾರ್ಥಿ ಸಮೂಹ ಸಾಗರದಂಗ
ಇರುವುದಿಲ್ಲಿ ಹೊಸಹೊಸ ಭಾವನೆಗಳ ಆಶಾತರಂಗ ॥

ನೀವಾಗದಿರಿ ದೀಪದ ಬೆಳಕಿಗೆ ಬಲಿಯಾಗುವ ಪತಂಗ
ನೀ ಮಾಡಿದರೆ ದುಷ್ಟ ಸ್ನೇಹಿತರ ಸನಿಹ ಸಂಗ
ತರುವುದು ನಿನ್ನ ಉನ್ನತ ವಿದ್ಯಾಭ್ಯಾಸಕ್ಕೆ ಭಂಗ
ಅವರಿವರ ಸಹವಾಸದಿಂದ ನೀನಾಗದಿರು ಮಂಗ
ಮಾಡು ನೀ ಉತ್ತಮ ಸ್ನೇಹಿತರ ಸಂಗ ॥

ಮರೆಯದಿರು ನೀ ವಿದ್ಯಾಭ್ಯಾಸ ಎಂಬುದೊಂದು ಪ್ರಮುಖ ಅಂಗ
ಕಷ್ಟ–ಪಟ್ಟು ಓದಿದರೆ ನಿನ್ನ ಗುರಿ ತಲುಪುವುದು ಉತ್ತುಂಗ
ತಿಳಿಯಲಾಗದು ಎಲ್ಲರ ಹುನ್ನಾರದ ಅಂತರಂಗ
ಸ್ವಾರ್ಥಕ್ಕಾಗಿ ಮಾಡದಿರಿ ಬೇರೆಯವರ ಆಶಾಭಂಗ
ಬಾಳೊಂದು ಬರೆದಿಟ್ಟ ನಿಶ್ಚಿತ ಚದುರಂಗ ॥

ಏರು ಪೇರಿನ ನೋವು–ನಲಿವಿನ ಭಿನ್ನ ತರಂಗ
ಮನದಾಳದ ಹಳೆ–ಹೊಸ ಚಿತ್ರಣದ ಅಂತರಂಗ
ಕಲಿಸುವುದು ಎಲ್ಲಾ ಅನುಭವಗಳ ಈ ಕಾಲೇಜುರಂಗ ॥



**ಮಂಜುಳ ಸೋಮಶೇಖರ್**
ಸಹಶಿಕ್ಷಕರು

# ಯಾವುದು ಈ ಫಲ

ಯಾವುದು ಈ ಫಲ?
ಯಾವುದು ಈ ರಾಮಫಲ?
ಯಾವುದು ಈ ಸೀತಾಫಲ?

ರಾಮನಿಗೆ ಪ್ರಿಯವಾದದ್ದು ರಾಮಫಲ
ಸೀತಾಳಿಗೆ ಪ್ರಿಯವಾದದ್ದು ಸೀತಾಫಲ
ಕಾನನದಲ್ಲಿ ವಾನರು ನೀಡಿದ ಫಲ ॥
॥ ಫಲ , ಫಲ , ಫಲ ॥

ಶಬರಿ ರಾಮನಿಗೆ ಕಾಡು ಮೇಡು ಹುಡುಕಿ ತಂದ ಫಲ
ಶಬರಿ ಕಚ್ಚಿ ರುಚಿ ನೋಡಿ ರಾಮನಿಗಾಗಿ ಕಾಯ್ದಿರಿಸಿದ ಫಲ
ಹೆಸರಿಲ್ಲದ ಎಷ್ಟೊಂದು ಫಲ ರುಚಿ ಮತ್ತು ಶುಚಿಯ ಫಲ ॥
॥ ಫಲ , ಫಲ , ಫಲ ॥

ರಾಮ ಮುಟ್ಟಿದ ಫಲ ರಾಮಫಲ
ಸೀತಾಳಿಗೂ ವಾನರು ನೀಡಿದ್ದು ಇದೇ ಫಲ
ಲಕ್ಷ್ಮಣನಿಗೆ ಸೀತಾ ನೀಡಿದ್ದ ಫಲ ಸೀತಾಫಲ ॥
॥ ಫಲ , ಫಲ , ಫಲ ॥

ಲಕ್ಷ್ಮಣನು ತೊಡೆಯಲ್ಲಿ ಬಚ್ಚಿಟ್ಟಿದ್ದ ಫಲ
ಸೀತಾರಾಮರಿಗೆ ಲಕ್ಷ್ಮಣ ಅರ್ಪಿಸಿದ ಫಲ
ಪುರಾಣಗಳಲ್ಲಿ ರಾಮ ಸೀತಾಳ ಹೆಸರಿನ ಫಲ ॥
॥ ಫಲ , ಫಲ , ಫಲ ॥

ರಾಮಾಯಣದಲ್ಲಿ ರಾಮ ಸೀತೆಗೆ ಹೆಸರು ಬಹಳ ಬಹಳ
ಲಕ್ಷ್ಮಣನು ಈ ಇಬ್ಬರಿಗೂ ಅರಣ್ಯದಲ್ಲಿ ಸತ್ಕರಿಸಿದ ಫಲ
ಇವರಲ್ಲದೆ ಬೇರೆಯವರ ಹೆಸರು ವಿರಳ ವಿರಳ ॥

ರಾಮ ಸೀತೆಗೆಂದೇ ಮೀಸಲಿಟ್ಟು ನೀಡಿದ ಫಲ
ವಾನರು, ಶಬರಿ ಕಚ್ಚಿದ ಫಲ ಸೀತಾರಾಮರ ಫಲ
ರಾಮಾಯಣದ ಕಥೆಗೆ ಸಫಲ ಸೀತಾಫಲ ರಾಮಫಲ ॥
॥ ಫಲ , ಫಲ , ಫಲ ॥



**ಲೀಲಾ ನಾಗೇಶ್**
ಸಹಶಿಕ್ಷಕಿ

# ಮನಸಿನ ಭಾವನೆ

ಜೀವನದ ಪ್ರತಿದಿನವೂ ಹೊಸ ಕಲಿಕೆ, ಬದಲಾವಣೆ
ಮನಸಿನ ಆಗಸದಲಿ ಮೋಡವಾಗುವ
ನೆನಪುಗಳ ಗಳಿಕೆ, ಕೆಲವೊಮ್ಮೆ
ಮೋಡ ಕರಗಿ ಮಳೆಯಾಗುವ ಕ್ಷಣಿಕೆ
ನೆನಪಿನ ಮಳೆಯಲಿ ನೆನೆಯುವ ಬಯಕೆ
ನೆನೆಯುತ ಈ ಕ್ಷಣ ಮರೆಯುವ ಭಯ ಮನಕೆ
ಆದರೂ ನೆನೆದಿರೊ ಮನಕೆ ಚೇತರಿಕೆ......॥



**ಅಭಿಷೇಕ್ ದೇವಲಾಪುರ**
ಸಹಶಿಕ್ಷಕರು

# ಸಂಕ್ರಮಣ

ಮುಂಜಾನೆಯ ಮಂಜಿನಲಿ
ಮಡಿಯನುಟ್ಟು ನಿಂತಿಹರು
ಅಂಗಳಕೆ ನೀರೆರೆದು ಬಿಡಿಸಿಹರು
ಚಿತ್ತಾರದ ರಂಗವಲ್ಲಿ...

ಸಿಂಗರಿಸಿದ ದನಕರುಗಳು, ಇವರು
ಅನ್ನದಾತ ಮಿತ್ರರು, ಮೆರವಣಿಗೆಗೆ
ಸಿದ್ದವಾಗಿದೆ ಜಾನುವಾರುಗಳು ಭೂದೇವಿಯ
ಮೂಕಸೇವಕರು...

ರೈತರ ಶ್ರಮದಿ ಬಂದ ವರುಷದ ಫಸಲು
ನೋಡುತಿರೆ ಆನಂದ ಧಾನ್ಯಗಳ ರಾಶಿಯ ಸಾಲು...
ಎಳ್ಳು ಬೆಲ್ಲದ ಸಿಹಿಯು ಹಂಚುತ.. ಸೌಹಾರ್ಧವ
ಸಾರುವ ಚಿಣ್ಣರು, ಕಬ್ಬಿನ ಜಲ್ಲೆಯ ರಸವ
ಹೀರುತ, ಹಬ್ಬದ ಸಡಗರದಿ ನಲಿದಿಹರು..
ಎಲ್ಲರ ಮನದಲ್ಲಿ ಮೂಡಲಿ ಶಾಂತಿ..
ಎಲ್ಲರ ಬಾಳನು ಬೆಳಗಲಿ ಸಂಕ್ರಾಂತಿ.

ಸರಸರದ ಕ್ರಾಂತಿ
ಸಂಭ್ರಮದ ಭ್ರಾಂತಿ
ಸುಗ್ಗಿಯ ಸ್ವಾತಿ ಸಂಕ್ರಾಂತಿ
ಹಳೆಯದ ಒಗೆದು ಹೊಸದೊಂದು ಹೊಸೆದು
ಹರುಷವ ತರುವ ಪ್ರೀತಿ ಸಂಕ್ರಾಂತಿ
ನೇಸರದ ಪಯಣಕೆ ಹಸುಗಳ ಹೆಜ್ಜೆಯ
ಹುಡುಗಿಯ ಗೆಜ್ಜೆಯ ಸೊಗಸೊಳು ಮುಳುಗಿರೊ
ಮನಸಿನ ಮತಿ – ಸಂಕ್ರಾಂತಿ
ವರುಷದ ಶ್ರಮಕೆ ಬೆಳೆಗಳ ಬಳಗವು ಪತಿ
ರವಿಯ ಹೊಸ ಕಳೆಗೆ ನೇಸರನು ಸತಿ
ಎಳ್ಳಿನ ರುಚಿಗೆ ಬೆಲ್ಲದ ಸಂಗಾತಿ
ಇದುವೇ ಹಳ್ಳಿಗರ ಹಾಡು ಪಾಡು ಸಂಕ್ರಾಂತಿ



**ನವ್ಯಶ್ರೀ ಧರಣೇಶ್**
ಸಹಶಿಕ್ಷಕಿ

# ಹೆಣ್ಣು

ನವಮಾಸ ಹೊತ್ತು ನಮ್ಮನ್ನು ಹಡೆದ ತಾಯಿಯು ಹೆಣ್ಣಲ್ಲವೇ?
ಕುಣಿ ಕುಣಿದು ನಲಿದು ನಮ್ಮನ್ನು ತಿದ್ದಿ ತೀಡಿದ ಸಹೋದರಿಯು ಹೆಣ್ಣಲ್ಲವೇ?
ನಾವಿರುವ ನೆಲವು ಕುಡಿಯುವ ಜಲವು ನಮ್ಮನ್ನು ಪೊರೆದಿಲ್ಲವೇ?
ಹೆಣ್ಣೆಂದರೇಕೀ ಆಲಸ್ಯ ನಿಮಗೆ, ಆಕೆಗೂ ಮನಸ್ಸಿಲ್ಲವೇ, ಆಕೆಗೂ ಕನಸಿಲ್ಲವೇ?
ಹೇ ಕಾಮುಕನೇ ನಿನಗ್ಯಾರು ಕೊಟ್ಟರು ಆಕೆಯ ಕನಸನ್ನು ಚಿವುಟುವ ಅವಕಾಶವ,
ನೀ ಮೃಗದ ಹಾಗೆ ಆಕೆಯ ಭಕ್ಷಿಸಿ ಕೊಲ್ಲುವ ಪರಿಪಾಟವ
ನಿನ್ನಂತಹ ನೀಚ ನಿಕೃಷ್ಠ ಮನಕೆ ಕಂಡಲ್ಲೆ ಗುಂಡು ಹೊಡೆಯಬೇಕು
ನಟ್ಟ ನಡು ಬೀದಿಯಲಿ ಕೇಶಮುಂಡನ ಮಾಡಿ ಕತ್ತೆಯ ಮೆರವಣಿಗೆ ಮಾಡಬೇಕು
ಈ ದೃಶ್ಯ ಕಂಡು ನಿನ್ನಂತ ಪಾಪಿ ಮನವು ಹೆಣ್ಣೆಂದರೆದರಬೇಕು
ಆಕೆಗೆ ಶಿರ ಬಾಗಬೇಕು
ಮುಂದಿನ ಪೀಳಿಗೆಗೆ ಇದು ಒಂದು ಪಾಠವಾಗಬೇಕು..॥



**ಹೆಚ್.ಎನ್.ವಜ್ರಪ್ರಸಾದ್**
ಸಹಶಿಕ್ಷಕರು

## ನಾಝಿಜಂ

ನಾಝಿಜಃ ಸಿದ್ಧಾಂತ ಬಿತ್ತಿದ ಅಸುರ
ಆರ್ಯ ಜನಾಂಗವೇ ಜಗತ್ತಿನೆತ್ತರ
ಯಹೂದಿ–ಕಮ್ಯನಿಸ್ಟರು–ಕ್ಯಾಥೋಲಿಕರು
ಸೋಷಿಯಲಿಸ್ಟರ ಹರಿಸಿದೆ ನೆತ್ತರು ॥

ಉಗ್ರ ರಾಷ್ಟ್ರವಾದ ನಿನ್ನ ಅಮಾನುಷತೆ
ಜನಾಂಗೀಯ ದ್ವೇಷಬಿತ್ತಲು 'ಗೊಬೆಲ್ಸ್'
ಜರ್ಮನಿಯ ಪ್ರಜೆಗಳ ಹಕ್ಕು ದಮನಕ್ಕೆ 'ಕಂದು ಅಂಗಿ'
ಸಾಕ್ಷಿಯಾದವೆ ನಿನ್ನಂತರಂಗದ ಕ್ರೌರ್ಯತೆಗೆ ॥

ಅಮಾಯಕರ ಸಾಮೂಹಿಕ ಕಗ್ಗೊಲೆಗಳ ಹೊಲೊಕಾಸ್ಟ್
ಗುಲಾಮರ ದಂಡಿಸುವ ಕಾನ್ಸೆಂಟ್ರೇಷನ್ ಕ್ಯಾಂಪ್ಸ್
ಸಾಮೂಹಿಕ ನರಮೇಧದ ಗ್ಯಾಸ್‌ಛೇಂಬರ್‌ನ ವಿಷಗಾಳಿ
ಸಾಕ್ಷಿಯಾಯಿತೆ ನಿನ್ನ ಜನಾಂಗೀಯ ಶ್ರೇಷ್ಠತೆ ॥

ಹಸುಗೂಸುಗಳ–ಅಬಲೆಯರ–ವೃದ್ಧಜೀವಿಗಳ
ಅಮಾನವೀಯ ಸಾಮೂಹಿಕ ಕೊಲೆ
ಹಿಂಸೆಯಿಂದ ಶ್ರೇಷ್ಠತೆ ಮೆರೆಯಲು ಹೊರಟ
ನೀನಾದೆ ಚರಿತ್ರೆಯ ಪುಟದಲಿ ಕಪ್ಪುಚುಕ್ಕೆ ॥

ಜಗತ್ತನ್ನೇ ಜಯಿಸಬೇಕೆಂಬ ಮಹತ್ವಾಕಾಂಕ್ಷೆ
"ಸರ್ವಾಧಿಕಾರತ್ವ" ಸರ್ವಸ್ವವೆಂಬ ಅಹಂ
ಹಿಂಸೆಯಿಂದ ಶ್ರೇಷ್ಠತೆಯೆಂಬ ಮದ
ಅಂತ್ಯವಾಯಿತೆ ನಿನ್ನ ದುರಂತ ಸಾವಿನಲಿ ॥

ಮಹಾತ್ಮನ ನುಡಿ: ಸತ್ಯದ ಪರಿಪೂರ್ಣ ದರ್ಶನಕ್ಕೆ
ಅಹಿಂಸೆಯ ಪರಿಪೂರ್ಣ ಆಚರಣೆ ಒಂದೇ ಸಾಧನೆ
ಗಾಂಧಿ ಮಹಾತ್ಮನಾದುದು ಅಹಿಂಸೆಯ ಮಾರ್ಗ
"ಅಹಿಂಸೆಯೇ ಪರಮ ಧರ್ಮ"

# ಅನುಬಂಧ

**ಗ್ರಾಮಭಾರತಿ ಪ್ರಕಟಣೆಗಳು**

1. ಕಾವ್ಯದೀಪ – ಕವನ ಸಂಕಲನ : ಕಾವ್ಯ ಎನ್.ಕೆ. – 2012
2. ಬೆಳದಿಂಗಳು – ಬಿಡಿ ಬರಹಗಳು : ಅಣ್ಣೇಗೌಡ ಕೆ. – 2018
3. ಶೀಲವಂತ ರಾಜಕಾರಣಿ – ಎಸ್.ಎಂ.ಲಿಂಗಪ್ಪ ಸಂಸ್ಮರಣಾ ಗ್ರಂಥ – 2019
4. ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಸಂಭ್ರಮ – ಪ್ರಬಂಧ ಸಂಕಲನ – 2023
5. ಕಾವ್ಯ ಸಂಭ್ರಮ – ಕವನ ಸಂಕಲನ – 2024